SM – 007

# ನಾಲ್ಕನೇ ಸೆಮಿಸ್ಟರ್ ಬಿ.ಎಸ್ಸಿ./ಬಿ.ಸಿ.ಎ. ಪರೀಕ್ಷೆ, ಮೇ/ಜೂನ್ 2010
## (ಫ್ರೆಶರ್ಸ್ - ಸೆಮಿಸ್ಟರ್ ಸ್ಕೀಂ)
## ಕನ್ನಡ ಭಾಷೆ – IV
## (ಸಾಹಿತ್ಯ ಸಂವಾದ – ೨)

Time : 3 Hours Max. Marks : 90

ಭಾಗ – ೧

I. ಅರ್ಥ ಮತ್ತು ಧ್ವನಿ ಬದಲಾಗದಂತೆ **ಮೂರು** ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ. **(3×2=6)**

1) ದುಡಿದರೆ ಮಾತ್ರ ದುಡ್ಡು ಉತ್ಪತ್ತಿ ಸಾಧ್ಯ.

2) ನಾನಾ ಉಪಾಯ ತಂತ್ರಗಳಿಂದ ಕೊಲ್ಲುವುದನ್ನು ಬೇಟೆ ಎನ್ನುತ್ತಾರೆ.

3) ಅಸ್ವಾಮಿನ ಹೆಣ್ಣುಗಳ ಚೆಲುವಿಗೆ ಮೈಬಣ್ಣ ಕಾರಣವಲ್ಲ.

4) ರಾಮನು ಕೈಕೇಯಿಯ ಜೀವನ ಪವಿತ್ರ ಎಂದ.

II. ಅರ್ಥವತ್ತಾದ ಕ್ರಮದಲ್ಲಿ **ಮೂರು** ವಾಕ್ಯಗಳನ್ನು ಪುನಾರಚಿಸಿ. **(3×2=6)**

1) ಪರೀಕ್ಷೆಯಾಗಿ ಆಟದ ಸಂದರ್ಭಗಳು ಸ್ವಭಾವದ ನಿರ್ಮಾಣಗೊಳ್ಳುತ್ತದೆ.

2) ಅಂಗವಾಗಿದೆ ಕ್ರೀಡೆ ಬದುಕಿನ ಅವಿಭಾಜ್ಯ

3) ಅದು ಸರಿಯಲ್ಲ ಮನುಷ್ಯನ ಯಂತ್ರವು ಕಟ್ಟಿಹಾಕಿದರೆ ಕೈಕಾಲು.

4) ನೀಲವರ್ಣೆಯಾಗಿದ್ದಳು ಭಾರತೀಯ ಮಹಾಶ್ರೀ ಪುರಾಣದ

III. ಉಪಮೆ ಮತ್ತು ರೂಪಕಗಳನ್ನು ಬಳಸಿ **ಮೂರು** ಸ್ವಂತ ವಾಕ್ಯಗಳನ್ನು ರಚಿಸಿ. **(3×2=6)**

1) ಹರಿಣಾಕ್ಷಿ

2) ತಿಮಿರ ಸಮುದ್ರ

3) ನೀಲವರ್ಣೆ

4) ಅಷ್ಟಮಿ ಚಂದ್ರನಂತೆ.

IV. **ಮೂರು** ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ. **(3×2=6)**

1) ಕ್ಲೀನ್ ಬೋಲ್ಡ್

2) ಕಂಗೆಟ್ಟು

3) ಪುಗಸಟ್ಟೆ

4) ಸೋಡಾಚೀಟಿ

P.T.O.

V. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ. (2×3

1) ಕಾಶೀಗೋಗಬೇಕಾದ್ರೂ ಕಾಸು ಬೇಕು.
2) ಕೈಗೆ ಬಂದ ತುತ್ತು ಕಳಚಿ ಬಿತ್ತು.
3) ಬೆಳೆಯುವ ಪೈರು ಮೊಳಕೆಯಲ್ಲಿ.
4) ಕೆಲಸಕ್ಕೆ ಕಾಯಿಲೆ ಊಟಕ್ಕೆ ಹುಷಾರು.

## ಭಾಗ – ೨

VI. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (4×5=

1) ಜಾತಿ–ಮೈಬಣ್ಣ–ಸೌಂದರ್ಯ ಇವುಗಳಿಗೆ ಇರಬಹುದಾದ ಸಂಬಂಧವೇನು ?
2) ಬೇಟೆಯೂ ಸಮಕಾಲೀನ ಸಂದರ್ಭದಲ್ಲಿ ಕ್ರೀಡೆಯೇ ?
3) ಮಹಾಡ್ ಗಲಭೆಯಲ್ಲಿ ನಿರತರಾದವರಿಗೆ ನ್ಯಾಯಾಲಯ ವಿಧಿಸಿದ ಶಿಕ್ಷೆ ಮತ್ತು ತೀರ್ಮಾನಗಳು ನ್ಯಾಯ ಸಮ್ಮತವೆ ?
4) 'ಟಾಮಿಗನ್ನಿನ ಕೊಡುಗೆಗಳ ಬಿಸುಟು ಬೈಬಲ್ಲು, ಗೀತೆ, ಖುರಾನ್‌ಗಳ ನೀಡುವಾಸೆ'–ಈ ಸಾಲು ಸೂಚಿಸುತ್ತಿರುವ ಅರ್ಥವೇನು ?
5) ಮೌಢ್ಯ, ಅಜ್ಞಾನ, ಹುಸಿತನದ ವಿಜೃಂಭಣೆ 'ದೇವರು–ಪೂಜಾರಿ' ಕವಿತೆಯಲ್ಲಿ ವ್ಯಕ್ತವಾಗಿರುವ ಬಗೆ ಹೇಗೆ ?
6) ಸಸ್ಯಾಹಾರದ ಆಯ್ಕೆ ಗೊರೂರರಿಗೆ ತಂದ ಪೇಚು ಯಾವುದು ?

## ಭಾಗ – ೩

VII. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. (2×10=2

1) ಬಹುರಾಷ್ಟ್ರೀಯ ಕಂಪನಿಗಳ ಲಾಭಕೋರ ನೀತಿಗಳನ್ನು ಕುರಿತು ಬರೆಯಿರಿ.
2) 'ಹಣದ ಹುಚ್ಚು' ಕವಿತೆಯಲ್ಲಿನ ಸಾಮಾಜಿಕ ಕಳಕಳಿಯ ಸ್ವರೂಪವೇನು ?
3) ಜೈವಿಕ ತಂತ್ರಜ್ಞಾನದ ನಿರಂಕುಶತೆ ಹಾಗೂ ವಿಕೃತಿಯನ್ನು ವಿವರಿಸಿ.

## ಭಾಗ – ೪

VIII. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. (2×10=20

1) ಪ್ರಭುತ್ವ ಹಾಗೂ ರಾಜಕಾರಣಗಳ ಸೂತ್ರ ಮೈಬಣ್ಣದಲ್ಲಿ ಅಡಗಿ ಹೋಗಿದೆಯೇ ? ಚರ್ಚಿಸಿ.
2) ವಂದನಾ ಶಿವ ಅವರು ಹೆಣ್ಣು ಮತ್ತು ಭೂಮಿಯ ಸಂಬಂಧವನ್ನು ಪರಿಭಾವಿಸುವ ಬಗೆ ಹೇಗೆ ?
3) ವರ್ತಮಾನದ ನಿರ್ಮಿತಿಯ ತುರ್ತು 'ಕಾಳಿಂಗ ಕ್ರೀಡೆ' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

**SM – 007**

# ನಾಲ್ಕನೇ ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ಮೇ/ಜೂನ್ 2010
## (ರಿಪೀಟರ್ಸ್ - ಸೆಮಿಸ್ಟರ್ ಸ್ಕೀಂ)
## ಕನ್ನಡ ಭಾಷೆ – IV
## ವೆನಿಸಿನ ವರ್ತಕ ಮತ್ತು ಬೆಕ್ಕಿನ ಕಣ್ಣು

Time : 3 Hours

Max. Marks : 90

I. ಅ) ಒಂದು ಭಾಗದ ಭಾವಾರ್ಥವನ್ನು ಬರೆಯಿರಿ. **(1×5=5)**

1) ದೇವಸದೃಶ ಸ್ನೇಹಭಾವ ಮತ್ತೆ ಉದಾತ್ತ ನೈಜ ತಿಳಿವಳಿಕೆ ;
ಅದು ಶಕ್ತಿಯುತವಾಗಿ ತೋರುತ್ತಿದೆ ತಮ್ಮ ಪತಿಯ
ಗೈರು ಹಾಜರಿಯನ್ನೀ ರೀತಿ ಸಹಿಸಿಕೊಳ್ಳುವುದರಲ್ಲಿ
ಆದರೆ ನೀವೀ ಗೌರವ ಯಾರಿಗೆ ತೋರಿದ್ದೀರಿ
ಎಂಥ ಸತ್ಯವಂತ ಸಂಭಾವಿತನಿಗೆ ಪರಿಹಾರ
ಒದಗಿಸಿದ್ದೀರಿ, ನನ್ನೊಡೆಯನಾದ ತಮ್ಮಪತಿಗೆಂಥ
ಅಕ್ಕರೆಯ ಮಿತ್ರನಿದ್ದಾನೆ.

2) ಹೊಳೆಯುವುದೆಲ್ಲ ಚಿನ್ನವಲ್ಲ
ಇದ ನೀನು ಬಹಳ ಕೇಳಿ ಬಲ್ಲೆಯಲ್ಲ
ನನ್ನ ಹೊರಗನಷ್ಟೆ, ನೋಡ ಬಯಸಿದವರು
ಎಷ್ಟು ಜನರು ತಮ್ಮ ಜೀವ ತೆತ್ತರು
ಹೊಳೆವ ಗೋರಿಗಳೊಳಗೆ ಹುಳುಗಳಿವೆ.

ಆ) **ಮೂರನ್ನು** ಸಂದರ್ಭಸಹಿತ ವಿವರಿಸಿ. **(3×3=9)**

1) ನಾ ಹೆಚ್ಚು ಹೊತ್ತು ಉಳಿದರಿಲ್ಲಿನಾ ಅಷ್ಟು ಮೂರ್ಖನಾಗುವೆ
2) ಹಾಗಿದ್ದರೆ ತ್ವರೆ ಮಾಡಿ ! ಅವುಗಳೊಂದರೊಳಗೆ ನಾ ಬೀಗಗೊಂಡಿದ್ದೇನೆ.
3) ವಂದನೆ ಒಡೆಯ, ತಾವು ನನಗೆ ಹೆಣ್ಣು ದೊರಕಿಸಿ ಕೊಟ್ಟಿರಿ.
4) ಓಡಿ ವೆನಿಸಿಗೆ, ನಿಮ್ಮ ಸ್ನೇಹಿತನ ನೆರವಿಗೆ.
5) ಮೇರಿ ಆಣೆಗೂ ನಿಮ್ಮಪ್ಪ ನಿಮ್ಮನ್ನ ಹಡೀಬಾರದಿತ್ತು.

ಇ) **ಮೂರು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(3×2=6)**

ಗ್ರಾಷಿಯಾನೊ, ಡಕೆಟ್, ಷೇಕ್ಸ್ಪಿಯರ್, ಲಿಯನಾರ್ಡೊ.

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (4×5=

1) 'ವೆನಿಸಿನ ವರ್ತಕ' ನಾಟಕ ಹಾಸ್ಯ ಮಿಶ್ರಿತ ನಾಟಕವೇ ?

2) ಭಾವನಾ ಪ್ರಪಂಚಕ್ಕೂ ವಾಣಿಜ್ಯ ಪ್ರಪಂಚಕ್ಕೂ ತಿಕ್ಕಾಟ ನಾಟಕದಲ್ಲಿ ಹೇಗೆ ಬಂದಿದೆ ?

3) ವರ್ಣ ಭೇದ ನೀತಿ ನಾಟಕದಲ್ಲಿ ಹೇಗೆ ಮೂಡಿಬಂದಿದೆ ?

4) ಉಂಗುರದ ಪ್ರಸಂಗವನ್ನು ಬರೆಯಿರಿ.

5) ಲಾನ್ಸ್‌ಲಟ್ ಮತ್ತು ಗೋಬೊ–ತಂದೆ ಮಗನ ಸ್ವಾರಸ್ಯ ಬರೆಯಿರಿ.

III. ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : (2×10=

1) ಆ್ಯರಗನ್ ಹಾಗೂ ಮರಾಕೋ ರಾಜಕುಮಾರರ ಸೋಲಿಗೆ ಕಾರಣ ವಿವರಿಸಿ.

2) ಬಸಾನಿಯೋ ಸ್ನೇಹಕ್ಕೆ ಬೆಲೆಕೊಟ್ಟ ಅಂಟೋನಿಗೆ ಬಂದ ಸ್ಥಿತಿಯೇನು ? ಪರಿಹಾರ ಹೇಗಾಯಿತು ?

3) ನಿರಿಸ, ಜೆಸಿಕಳ ಪಾತ್ರ ಪರಿಚಯಿಸಿ.

4) ಷೈಲಾಕ್ ತಾನು ತೋಡಿದ ಹಳ್ಳಕ್ಕೆ ತಾನೇ ಹೇಗೆ ಬಿದ್ದ ? ವಿವರಿಸಿ.

IV. ಐದು ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : (5×1=

1) ರಾಜಶೇಖರ ಯಾರ ಮಗ ?

2) ಆಸ್ಪತ್ರೆಯಿಂದ ಕುಸುಮಳನ್ನು ಎಲ್ಲಿಗೆ ಕಳಿಸಬೇಕು ಎಂದು ವೈದ್ಯರು ಸಲಹೆಯನಿತ್ತರು ?

3) ಕುಸುಮ ಸಾಕಿದ್ದ ಪ್ರಾಣಿಗಳು ಯಾವುವು ?

4) ರಾಯರ ತಾಯಿಯ ಹೆಸರೇನು ?

5) ಅವಲಕ್ಕಿ ಸರ ಕದ್ದವರಾರು ?

6) ಪದ್ಮಳ ಕಣ್ಣು ಹೇಗಿತ್ತು ?

7) ರಾಜಮ್ಮನಿಗೆ ಮದುವೆಯಾದ ಎಷ್ಟು ವರ್ಷಕ್ಕೆ ಕುಸುಮ ಹುಟ್ಟಿದಳು ?

V. **ಒಂದು** ವಿಷಯದ ಬಗ್ಗೆ ವಿವರವಾದ ಟಿಪ್ಪಣಿ ಬರೆಯಿರಿ : (1×5=

1) ಪದ್ಮ ಕುಸುಮಳನ್ನು ಮೊದಲ ಬಾರಿ ತಿರಸ್ಕರಿಸಿದ ಪ್ರಸಂಗ

2) ಪಾಲಿಯನ್ನು ದ್ವೇಷಿಸಲು ಕಾರಣ

VI. ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : (2×10=2

1) ಆಸ್ಪತ್ರೆಯಲ್ಲಿ ವಿವಿಧ ಮಾನಸಿಕ ರೋಗಿಗಳಿಂದ ನರಳುತ್ತಿದ್ದ ರೋಗಿಗಳ ವಿಚಿತ್ರ ವರ್ತನೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

2) 'ಬೆಕ್ಕಿನ ಕಣ್ಣು' ಕಾದಂಬರಿಯಲ್ಲಿ ಮನುಷ್ಯ ಸಂಬಂಧಗಳ ಗಾಢತೆಗಳನ್ನು ವಿಶ್ಲೇಷಿಸಿ.

3) 'ಬೆಕ್ಕಿನ ಕಣ್ಣು' ಒಂದು "ಮನೋವಿಶ್ಲೇಷಣಾತ್ಮಕ ಕಾದಂಬರಿ" ಎಂಬ ಹೇಳಿಕೆಯನ್ನು ಉದಾಹರಣೆ ಸಹಿತ ವಿವರಿಸಿ.

4) ಮಹತ್ವಾಕಾಂಕ್ಷಿಯಾದ ಪದ್ಮಳ ನಡವಳಿಕೆ ಬಗೆಗೆ ನಿಮ್ಮ ಅನಿಸಿಕೆ ಏನು ? ವಿವರಿಸಿ.